UASB Library
Newspaper Clippings
Friday 22-04-2022 Pg .1
Jai Kisan

25 ರಿಂದ ರಾಗಿ ಖರೀದಿ ಕೇಂದ್ರ ಆರಂಭ

ಗೊಬ್ಬರ ಕೊರತೆ ಇಲ್ಲ,ಆತಂಕಬೇಡ: ರೈತರಿಗೆ ಸಚಿವ ಬಿ.ಸಿ.ಪಾಟೀಲ್ ಅಭಯ

ಹುಣಸೂರು: ಜಿಲ್ಲೆಯಲ್ಲಿ4 ಸಾವಿರ ಮೆಟ್ರಿಕ್ ಟನ್‌ನಷ್ಟು ರಸಗೊಬ್ಬರ ದಾಸ್ತಾನಿದ್ದು, ರಸಗೊಬ್ಬರಕ್ಕೆ ಕೊರತೆಯಿಲ್ಲ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ಗುರುವಾರ ಹುಣಸೂರು ನಗರದ ಹೊರವಲಯದ ಗೋವಿಂದ ನಹಳ್ಳಿ ಗ್ರಾಪಂ ವ್ಯಾಪ್ತಿಯ ರಾಮು ಬಡಾವಣೆಯಲ್ಲಿ 80 ಲಕ್ಷ ರೂ. ವೆಚ್ಚದಡಿ ನಿರ್ಮಾಣಗೊಂಡಿರುವ ಕೃಷಿ ಇಲಾಖೆ ಉಪನಿರ್ದೇಶಕರ ಕಚೇರಿ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬೇಡಿಕೆ 1.09 ಲಕ್ಷ ಮೆಟ್ರಿಕ್ ಟನ್ ಆಗಿದ್ದು, ಏಪ್ರಿಲ್ ತಿಂಗಳಿನಲ್ಲಿ 13 ಸಾವಿರ ಮೆಟ್ರಿಕ್ ಟನ್‌ನಷ್ಟು ರಸಗೊಬ್ಬರ ಬೇಡಿಕೆಯಿದ್ದು, ಈಗಾಗಲೇ 18 ಸಾವಿರ ಮೆಟ್ರಿಕ್ ಟನ್ ನಷ್ಟು ಪೂರೈಸಿದ್ದೇವೆ. ಇನ್ನೂ 4085 ಮೆಟ್ರಿಕ್ ಟನ್‌ನಷ್ಟು ದಾಸ್ತಾನು ಇದೆ. ವಾಡಿಕೆ ಮಳೆಗಿಂತ (80 ಮಿ.ಮಿ.) ಈ ಬಾರಿ ಹೆಚ್ಚಾಗಿದೆ. ಬಿತ್ತನೆ ಬೀಜ, ಕೀಟನಾಶಕ ಪೂರೈಕೆಯಲ್ಲೂ ವ್ಯತ್ಯಯವಾಗದಂತೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ರಾಗಿ ಖರೀದಿ ಪುನಾರಂಭ: ರೈತರ ಬೇಡಿಕೆ ಮತ್ತು ಒತ್ತಾಯದ ಮೇರೆಗೆ 1.40 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಗೆ ನಿರ್ಧರಿಸಿದ್ದು, ಏ.25ರಿಂದ ರಾಜ್ಯಾದ್ಯಂತ ಖರೀದಿ ಕೇಂದ್ರ ಆರಂಭಗೊಳ್ಳಲಿದೆ. ಅಂದಿನಿಂದಲೇ ರೈತರು ನೋಂದಣಿ ಮಾಡಿಸಬಹುದಾಗಿದೆ ಎಂದರು. ಮಡಿಕೇರಿ, ಬನ್ನೂರು ಮುಂತಾದ ಕಡೆ ರಸ ಗೊಬ್ಬರವನ್ನು ಅಕ್ರಮವಾಗಿ ಅಂತಾರಾಜ್ಯಗಳಿಗೆ ಸಾಗಾಣಿ ಮಾಡುತ್ತಿರುವ ಕುರಿತು ವರದಿಗಳು ಬಂದಿದ್ದು, ಇಲಾಖೆಯ ಜಾಗೃತದಳ ಈ ಎಲ್ಲ ಪ್ರಕರಣಗಳನ್ನು ಪತ್ತೆಹಚ್ಚಿ ತಪ್ಪಿಸ್ಥರ ವಿರುದ್ಧ ಕ್ರಮವಹಿಸಿದೆ. ಚೆಕ್‌ಪೋಸ್ಟ್‌ಗಳಲ್ಲಿ ಜಾಗೃತದಳ ಕ್ರಿಯಾಶೀಲವಾಗಿ ಇಂತಹ ಅಕ್ರಮಗಳನ್ನು ಪತ್ತೆಹಚ್ಚಿ ಕಾನೂನಿನಡಿ



ಹುಣಸೂರು ಪಟ್ಟಣದ ಹೊರವಲಯದ ರಾಮು ಬಡಾವಣೆಯಲ್ಲಿ ಕೃಷಿ ಇಲಾಖೆ ಉಪನಿರ್ದೇಶಕರ ಕಚೇರಿ ಕಟ್ಟಡವನ್ನು ಕೃಷಿ ಸಚಿವ ಬಿ.ಸಿ.ಪಾಟೀಲ್ ಉದ್ಘಾಟಿಸಿದರು.

ಕ್ರಮವಹಿಸುತ್ತಿದೆ ಎಂದರು.

ಶಾಸಕ ಎಚ್.ಪಿ.ಮಂಜುನಾಥ್ ಮಾತನಾಡಿ, ರೈತಪರ ಕಾಳಜಿಯಿಂದ ಕಾರ್ಯಕ್ರಮಗಳ ಅನುಷ್ಠಾನಗೊಳ್ಳಬೇಕಿದೆ. ಕೋವಿಡ್ ನಂತರದ ದಿನಗಳಲ್ಲಿ ರೈತರು ಹೆಚ್ಚು ಸಂಕಷ್ಟಕ್ಕೆ ಒಳಗಾಗಿದ್ದು, ರಾಗಿ ಖರೀದಿ ಕೇಂದ್ರದ ಮರು ಆರಂಭದ ನಿರ್ಧಾರ ಸ್ವಾಗತಾರ್ಹ ಎಂದರು.

ಕ್ರಿಮಿನಲ್ ಮೊಕದ್ದಮೆ ದಾಖಲು

ರಾಜ್ಯದಲ್ಲಿ ಕೃಷಿ ಇಲಾಖೆ ವಿಜಲೆನ್ಸ್ ತಂಡಕ್ಕೆ ಹೆಚ್ಚಿನ ಶಕ್ತಿ ನೀಡಿದ್ದರಿಂದಾಗಿ 2021-22 ನೇ ಸಾಲಿನಲ್ಲಿ 141 ಪ್ರಕರಣಗಳನ್ನು ದಾಖಲಿಸಲಾಗಿದೆ. 72 ಲಕ್ಷ ರೂ.ಮೌಲ್ಯದ ಕಳಪೆ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಔಷಧ ವಶಪಡಿಸಿಕೊಂಡು ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ ಎಂದು ಸಚಿವ ಬಿ.ಸಿ.ಪಾಟೀಲ ಹೇಳಿದರು. ರಾಜ್ಯದ ವಿವಿಧೆಡೆ ದಾಳಿ ನಡೆಸಿರುವ ತಂಡ 1,394 ಕ್ವಿಂಟಾಲ್ ಬಿತ್ತನೆ ಬೀಜ, 984 ಕ್ವಿಂಟಾಲ್ ರಸಗೊಬ್ಬರ, 10352 ಲೀಟರ್ ನಷ್ಟು ಕೀಟನಾಶಕ ಜಪ್ತಿ ಮಾಡಿ ಐತಿಹಾಸಿಕ ದಾಖಲೆ ನಿರ್ಮಿಸಿದೆ ಎಂದು ಸಚಿವರು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ2 ಮಹಿಳಾ ಸ್ವಸಹಾಯ ಸಂಘಗಳಿಗೆ ಟ್ರ್ಯಾಕ್ಟರ್‌ಗಳನ್ನು ಸಚಿವರು ವಿತರಿಸಿದರು. ತಲಾ 5 ಮಂದಿ ರೈತರಿಗೆ ರೋಟಾವೇಟರ್, ಸ್ಪ್ರಿಂಕ್ಲರ್ ಮತ್ತು ಕಲ್ಟಿವೇಟರ್‌ಗಳನ್ನು ವಿತರಿಸಲಾಯಿತು. 50 ಲಕ್ಷ ರೂ.ವೆಚ್ಚದಲ್ಲಿನಿರ್ಮಾಣಗೊಂಡಿರುವ ಹನಗೋಡು ರೈತಸಂಪರ್ಕ ಕೇಂದ್ರದ ನಾಮ ಫಲಕವನ್ನು ಸಚಿವರು ಅನಾವರಣಗೊಳಿಸಿದರು. ಇದೇ ವೇಳೆ ಕೃಷಿ ಅಭಿಯಾನದ ರಥಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಗೋವಿಂದನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಸನ್ನಕುಮಾರ್, ಉಪಾಧ್ಯಕ್ಷೆ ಸಿರೀನ್ ತಾಜ್, ಕೃಷಿ ಇಲಾಖೆ ನಿರ್ದೇಶಕಿ ನಂದಿನಿ ಕುಮಾರಿ, ಕೃಷಿ ಇಲಾಖೆ ಜೆಡಿ ಮಹಂತೇಶಪ್ಪ ಉಪ ನಿರ್ದೇಶಕ ಧನಂಜಯ್, ಸಹಾಯಕ ನಿರ್ದೇಶಕ ಜೆ.ವೆಂಕಟೇಶ್, ಸಿಬ್ಬಂದಿ ಮತ್ತು ರೈತರು ಹಾಜರಿದ್ದರು.

22-04-2022
Uv Pg 08

ಹಣ್ಣುಗಳ ಸ್ವರ್ಗ ಅಫ್ಘಾನಿಸ್ತಾನದ ಹಫ್ತ್ ಮೇವಾ

ಹುಸೇನಿ, ತೈಫಿ, ಕಸೆಂದ್ರ, ಲಾಲ್, ಖಿತಾ, ಗೊಲಾಘನ್, ರೌಚಾ, ಶೊಂದಾಖನೈ, ಕೆಶ್ಮಿಶಿ, ಕಪ್ಪು ಕೆಶ್ಮಿಶಿ, ಮೆಹೆರ್, ಅಮಲ್ದಿ....ಹೆಸರು ಎಲ್ಲೋ ಕೇಳಿದಂತಿದೆಯಲ್ಲ... ರವೀಂದ್ರನಾಥ ಟ್ಯಾಗೂರರ 'ಕಾಬೂಲಿವಾಲ' ಕತೆ ನೆನಪಿಸುವ ಈ ಮೇಲಿನ ಹೆಸರುಗಳೆಲ್ಲ 'ಹಣ್ಣುಗಳಸ್ವರ್ಗ'ವೆಂದೇಕರೆಯಲ್ಪಡುವ ಅಫ್ಘಾನಿಸ್ತಾನದಲ್ಲಿ ಶತಶತಮಾನಗಳಿಂದ ಬೆಳೆಯುತ್ತಿರುವ ದ್ರಾಕ್ಷಿ ತಳಿಗಳದ್ದು. ಭಾರತೀಯ ಪುರಾಣೇತಿಹಾಸದ ಪುಟಗಳಲ್ಲಿ 'ಗಾಂಧಾರ'ವಾಗಿದ್ದ ಈ ಪರ್ವತದೇಶದ ದಾಳಿಂಬೆ, ಸೇಬು, ಮರಸೇಬು, ಕಲ್ಲಂಗಡಿ, ದ್ರಾಕ್ಷಿ, ಒಣಹಣ್ಣುಗಳಾದ ಕಿಶ್ಮಿಶ್(ಒಣದ್ರಾಕ್ಷಿ), ಬಾದಾಮಿ, ಪಿಸ್ತಾ, ಆ್ಯಪ್ರಿಕಾಟ್, ಆಕ್ರೂಟ್‌ಗಳಿಗೆ ವಿಶ್ವಾದ್ಯಂತ ಬೇಡಿಕೆಯಿದೆ.



ದ್ರಾಕ್ಷಿ ಹಾಗೂ ಆಫ್ಘಾನಿಸ್ತಾನದ ನಡುವಿನ ನಂಟು ಕ್ರಿಸ್ತಪೂರ್ವ 2000ಕ್ಕೂ ಹಿಂದಿನದ್ದೆನ್ನಲಾಗಿದೆ. ಇಲ್ಲಿ ದ್ರಾಕ್ಷಿ ಬೆಳೆಗಾರರು ಹಾಗೂ ಮಾರಾಟಗಾರರು ತಲೆತಲಾಂತರಗಳಿಂದ ಅನೂಚಾನವಾಗಿ ನಡೆದುಬಂದಿರುವ ಪರಂಪರಾಗತ ಕಾಯಕವನ್ನು ಮುಂದುವರೆಸಿದ್ದಾರೆ. ಈ ದೇಶದಲ್ಲಿ ಈಗಲೂ ಸಾಂಪ್ರದಾಯಿಕ ವಿಧಾನದಲ್ಲೇ ದ್ರಾಕ್ಷಿ ಬೆಳೆಯುವುದು, ದಾಸ್ತಾನು, ಸಂಸ್ಕರಣೆ, ಮಾರಾಟ ನಡೆಯುವುದು. ಇಲ್ಲಿಯಾವುದೇ ಯಂತ್ರ ಆಥವಾ ಆಧುನಿಕ ತಂತ್ರಜ್ಞಾನದ ನೆರವಿಲ್ಲದೆ ದ್ರಾಕ್ಷಿಯ ತಾಜಾತನವನ್ನು ಕಟಾವು ಮಾಡಿದ ಆರು ತಿಂಗಳ ನಂತರವೂ ಹಾಗೇ ಉಳಿಸಿ, ಸಂರಕ್ಷಿಸಲಾಗುತ್ತದೆ. ಈ ಪಾರಂಪರಿಕ ವಿಧಾನದ ಹೆಸರು 'ಕಂಗಿನ' ಅಥವಾ 'ಗಂಗಿನ'.

ಆಧುನಿಕರಪ್ಲಾಸ್ಟಿಕ್, ಲೋಹದ ತಡಿಕೆಯ ಹಂಗಿಲ್ಲದ ಓಬೀರಾಯನ ಕಾಲದ ಪರಿಸರ ಸ್ನೇಹಿ ಸಂರಕ್ಷಣಾ ಕ್ರಮವಿದು. ಕೇವಲ ಒಣಹುಲ್ಲು ಹಾಗೂ ಮಣ್ಣಿನಿಂದ ಸಿದ್ಧಪಡಿಸಿದ ಎರಡು ಬಟ್ಟಲುಗಳ ನಡುವೆ ಒಂದು ಕಿಲೋ ದ್ರಾಕ್ಷಿಯನ್ನು ಮುಚ್ಚಿಟ್ಟು, ಸೂರ್ಯನ ಕಿರಣಗಳ ಸ್ಪರ್ಶವಾಗದಂತೆ ತಂಪಾದ ಸ್ಥಳದಲ್ಲಿ ಸಂಗ್ರಹಿಸಿಡುವ ವಿಧಾನವನ್ನು ಕಂಗಿನ ಎಂದು ಕರೆಯಲಾಗುತ್ತದೆ. ಆರು ತಿಂಗಳ ವರೆಗೆ ಈ ಮಣ್ಣಿನ 'ಜಿಪ್‌ಲಾಕ್' ಬಟ್ಟಲುಗಳಲ್ಲಿನ ಹಣ್ಣು ಕೆಡುವುದಿಲ್ಲ. ಬೆರಣಿಯೋ ಇಲ್ಲಾ ಮಣ್ಣಿನ ಹಾರುತಟ್ಟೆಯೋ ಎಂದು ಗಲಿಬಿಲಿಗೊಳಿಸುವ ಈ ಮೃಣ್ಮಯ ಮುಚ್ಚಿದ ಬಟ್ಟಲುಗಳಲ್ಲಿನ ದ್ರಾಕ್ಷಿ ಹಣ್ಣು ಅಂಗಡಿಗಳಲ್ಲಷ್ಟೇ ಅಲ್ಲ, ದೇಶದ ಉದ್ದಗಲಕ್ಕೂ ಬೀದಿಬೀದಿಗಳಲ್ಲಿ ತಳ್ಳುಗಾಡಿಗಳಲ್ಲಿ ಮಾರಾಟವಾಗುತ್ತವೆ.



ಬೆಳ್ಳಿಮೋಡ

■ ಶಾಂತಲಾ ಧರ್ಮರಾಜ್

ಒಬ್ಬ ವ್ಯಾಪಾರಿ ಒಂದು ಟನ್ ದ್ರಾಕ್ಷಿಯನ್ನು ಬೆಳೆಗಾರನಿಂದ ಖರೀದಿಸಿದರೆ ಅದರಲ್ಲಿ ಅರ್ಧದಷ್ಟನ್ನು ಕಂಗಿನ ವಿಧಾನದಲ್ಲಿದಾಸ್ತಾನು ಮಾಡಿತನಗೆಬೇಕಾದಾಗ ಲಾಭಕ್ಕೆಮಾರಾಟಮಾಡುವುದುಇಲ್ಲಿಸರ್ವೇಸಾಮಾನ್ಯ. ಚಳಿಗಾಲ ಹಾಗೂ ವಸಂತ ಋತುವಿನಲ್ಲಿ ಹಸಿದ್ರಾಕ್ಷಿ ತಿನ್ನಲು ಲಭ್ಯವಾಗದ ಕಾರಣ, ಕಂಗಿನ ಬಟ್ಟಲುಗಳಲ್ಲಿ ಸಂರಕ್ಷಿಸಿ, ಸಂಗ್ರಹಿಸಿದ ಹಣ್ಣು ದೊರೆಯದ ಸಮಯಕ್ಕೆ ಬಳಕೆಗೆ ಬರುತ್ತದೆ. ಇದು ಅಪ್ಪಟ ದೇಸೀ ತಂತ್ರಜ್ಞಾನ. ದ್ರಾಕ್ಷಿ ವ್ಯಾಪಕವಾಗಿ ಬೆಳೆಯುವ ಆಫ್ಘನಿಸ್ತಾನದ ಉತ್ತರ ಹಾಗೂ ಮಧ್ಯಭಾಗದ ಪ್ರಾಂತಗಳಲ್ಲಿ ಇದೇ ಕ್ರಮ ಈ ಹೊತ್ತಿಗೂ ಬಳಕೆಯಾಗುತ್ತಿದೆ.

ವಾರ್ಷಿಕ 1.5 ಮಿಲಿಯನ್ ಟನ್ ಹಣ್ಣು ಉತ್ಪಾದಿಸುವ ಈ ರಾಷ್ಟ್ರದ ದಕ್ಷಿಣ ಭಾಗದಲ್ಲಿ ದಾಳಿಂಬೆ, ಕಲ್ಲಂಗಡಿ, ಮಧ್ಯಭಾಗದಲ್ಲಿಸೇಬು, ಚೆರ್ರಿ, ಆ್ಯಪ್ರಿಕಾಟ್, ದ್ರಾಕ್ಷಿ ಹಾಗೂ ಉತ್ತರದಲ್ಲಿ ವ್ಯಾಪಕವಾಗಿ ದ್ರಾಕ್ಷಿ ಬೆಳೆಯಲಾಗುತ್ತದೆ. ದೇಶದಲ್ಲಿ ಒಟ್ಟು 78405 ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ಕಂದಹಾರ್, ಹೆಲ್ಮಂದ್ ಪ್ರಾಂತಗಳ ದ್ರಾಕ್ಷಿ ಉತ್ಕೃಷ್ಟವೆಂದು ಪರಿಗಣಿಸಲ್ಪಟ್ಟಿದೆ. ಇಲ್ಲಿಯವರ ದ್ರಾಕ್ಷಿ ಮೆಲ್ಲುವ ಚಪಲ ಅದೆಷ್ಟೆಂದರೆ ತಾವು ಬೆಳೆದಿದ್ದಷ್ಟೇ ಅಲ್ಲದೆ ನೆರೆಯ ತಜಿಕಿಸ್ತಾನ ಹಾಗೂ ಕಿರ್ಗಿಸ್ತಾನಗಳಿಂದಲೂ ಟನ್ನುಗಟ್ಟಲೆ ತೈಫಿ(ದ್ರಾಕ್ಷಿ) ಖರೀದಿಸುತ್ತಾರೆ. ಈ ಎರಡೂ ದೇಶಗಳಲ್ಲಿ ದ್ರಾಕ್ಷಿ ಸಂರಕ್ಷಣೆಯ ಮಾರ್ಗೋಪಾಯಗಳಲ್ಲದಿರುವುದರಿಂದ ಆಲ್ಲಿಯವರು ಆಫ್ಘನ್ ವ್ಯಾಪಾರಿಗಳ ನಿರೀಕ್ಷೆಯಲ್ಲಿ ಚಾತಕಗಳಾಗಿರುತ್ತಾರೆ. ಓಬೀರಾಯನ ಕಾಲದ್ದಾದರೂ ಆಫ್ಘನ್ನರ ಕಂಗಿನ ಇಂದಿಗೂ ಚಾಲ್ತಿಯಲ್ಲಿದ್ದು, ರೈತರ, ವ್ಯಾಪಾರಿಗಳ ಪಾಲಿನ ವರಪ್ರದ ತಂತ್ರಜ್ಞಾನವಾಗಿದೆ.

ಸದ್ಯ ಗಾಂಧಾರ ದೇಶದಲ್ಲಿ ಬೆಳೆಯುವ ಹಣ್ಣುಗಳಲ್ಲಿ ಮೂರನೇ ಒಂದು ಭಾಗದಷ್ಟು ಮಾತ್ರ ರಫ್ತಾಗುತ್ತಿದ್ದು, ಉಳಿದ ಅಷ್ಟೂ ಹಣ್ಣು ಆಂತರಿಕವಾಗಿ ಬಳಕೆಯಾಗುತ್ತದೆ. ಕಾರಣ ಇಲ್ಲಿಯ ಜನರ ಆಹಾರಶೈಲಿ. ಇವರಿಗೆ ಊಟದಲ್ಲಿ ಶೇ. 50ರಷ್ಟು ತಾಜಾ ಹಣ್ಣು ಇರಲೇಬೇಕು. ಆಫ್ಘನ್ನರ ವೈಭೋಗದ ಜೀವನವೆಂದರೆ ಪರ್ವತಗಳಿಗೆ ವಿಹಾರ ತೆರಳುವುದು, ಪ್ರಕೃತಿಸೌಂದರ್ಯ ಬಣ್ಣಿಸುತ್ತಾ ಕವಿಯಾಗಿ, ಮುಷ್ಕೆರಾಗಳಲ್ಲಿ ಕಾವ್ಯದ ಹೊಳೆ ಹರಿಸುವುದು ಹಾಗೂ ಏಳು ತರಹದ ಒಣ ಹಣ್ಣುಗಳಿಂದ ತಯಾರಿಸಿದ 'ಹಫ್ತ್ ಮೇವಾ' ಖಾದ್ಯ ಮೆಲ್ಲುವುದು...ಇವಿಷ್ಟಾದರೆ ಈ ಆಫಘನಿಗಳಿಗೆ ಸ್ವರ್ಗಕ್ಕೆ ಕಿಚ್ಚು ಹಚ್ಚಿದ ಹಾಗೆ!

22-04-2022
Sk Pg 08

"Understanding a question is half an answer"

ಅಕಾಲಿಕ ಮಳೆ ಟೊಮೇಟೊ ಬೆಲೆ ಹೆಚ್ಚಳ

ಸಂ.ಕ. ಸಮಾಚಾರ ಬೆಂಗಳೂರು:
ಕಳೆದ ಒಂದು ವಾರ ರಾಜ್ಯದ ವಿವಿಧ ಭಾಗಗಳಲ್ಲಿ ಸುರಿದ ಅಕಾಲಿಕ ಮಳೆ ಜೊತೆಗೆ ಏರುಮುಖವಾದ ಬಿಸಿಲಿನ ತಾಪದಿಂದಾಗಿ ಟೊಮೇಟೊ ಸೇರಿದಂತೆ ಕೆಲವು ತರಕಾರಿ ಬೆಲೆಗಳು ಹೆಚ್ಚಾಗಿವೆ.

ಬೇಸಿಗೆ ಸಂದರ್ಭದಲ್ಲಿ ತೀರಾ ಕಡಿಮೆ ಬೆಲೆಗೆ ಸಿಗುತ್ತಿದ್ದ ಟೊಮೇಟೊ ಮೂರು ದಿನಗಳಿಂದ ಏರಿಕೆಯತ್ತ ಸಾಗುತ್ತಿದೆ. ಸಾಮಾನ್ಯ ಗುಣಮಟ್ಟದ ಟೊಮೇಟೊ ಪ್ರತಿ ಕೆ.ಜಿ.ಗೆ 25 ರೂ. ದಾಟಿದೆ. ಗುಣಮಟ್ಟದ ಟೊಮೇಟೊ ಬೆಲೆ 50 ರೂ.ವರೆಗೆ ಮಾರಾಟವಾಗುತ್ತಿದೆ.

ಬೆಂಗಳೂರು ಹಾಗೂ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಕಳೆದ ಒಂದು ವಾರದಿಂದ ಸುರಿದ ಮಳೆಯಿಂದಾಗಿ ಟೊಮೇಟೊ ಬೆಳೆ ಹಾಳಾಗಿದೆ. ಇದರಿಂದ ದಿಢೀರ್ ಬೆಲೆ ಏರಿಕೆಯಾಗುತ್ತಿದೆ. ಮಳೆ ಹಾಗೂ ಬಿಸಿಲಿನ ತಾಪಮಾನದಿಂದ ಮಾರುಕಟ್ಟೆಗೆ ಪೂರೈಕೆ ಕಡಿಮೆಯಾಗಿದೆ. ಹಾಲಿ ಹಾಕಿರುವ ಬೆಳೆ ಕೈಗೆ ಬರುವವರೆಗೆ ಟೊಮೇಟೊ ದರ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಇದರ ಜೊತೆಗೆ ಹುರುಳಿಕಾಯಿ ಕೆಜಿಗೆ 80 ರೂಪಾಯಿಗೆ ಹೆಚ್ಚಾಗಿದ್ದರೆ, ದೊಡ್ಡಮೆಣಸಿನಕಾಯಿ 80 ರೂ, ಹಸಿಮೆಣಸಿನಕಾಯಿ 65 ರೂ, ಕೊತ್ತಂಬರಿ ಕಟ್ಟಿಗೆ 60 ರೂ, ಕರಿಬೇವಿನ ಸೊಪ್ಪು ಕೆಜಿಗೆ 85 ರೂಪಾಯಿ ಆಗಿದೆ.

ಈಗಾಗಲೇ ಪೆಟ್ರೋಲ್, ಡೀಸೆಲ್ ಬೆಲೆ, ಅಡುಗೆ



ಅನಿಲ ದರ ಏರಿಕೆಯಿಂದ ಕಂಗೆಟ್ಟಿದ ಜನರಿಗೆ ಈಗ ಟೊಮೇಟೊ ಬೆಲೆ ಏರಿಕೆಯ ಹೊಡೆತ ಬೀಳುವ ಆತಂಕ ಎದುರಾಗಿದೆ. ಪ್ರಮುಖವಾಗಿ ಟೊಮೇಟೊ ಬೆಳೆಯುವ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮೀಣ ಪ್ರದೇಶಗಳಲ್ಲಿ ಅಕಾಲಿಕ ಮಳೆ ಹಾಗೂ ಬಿಸಿಲಿನ ತಾಪಮಾನ ಹೆಚ್ಚಾದ್ದರಿಂದ ಟೊಮೇಟೊ ಬೆಳೆ ನಾಶವಾಗುತ್ತಿದೆ. ಹೀಗಾಗಿ ಮಾರುಕಟ್ಟೆಗೆ ಪೂರೈಕೆ ಕಡಿಮೆಯಾಗಿರುವುದರಿಂದ ಬೆಲೆ ಏರಿಕೆಗೆ ಕಾರಣವಾಗಿದೆ. ವಾರದ ಹಿಂದೆಲ್ಲಾ ಒಂದು ಕೆಜಿ ಟೊಮೇಟೊಗೆ ಕೇವಲ 5 ರಿಂದ 10 ರೂಪಾಯಿಗೆ ಮಾರಾಟವಾಗುತ್ತಿತ್ತು. ಆದರೀಗ ಮಳೆ ಹೊಡೆತದಿಂದ ನಗರದಲ್ಲಿ ಟೊಮೇಟೊ ಕೆಜಿಗೆ 40 ರಿಂದ 45 ರೂಪಾಯಿಗೆ ಮಾರಾಟವಾಗುತ್ತಿದೆ.

ಮಾರುಕಟ್ಟೆಗೆ ಪ್ರಮುಖವಾಗಿ ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಇನ್ನಿತರ ನೆರೆಯ ಜಿಲ್ಲೆಗಳಲ್ಲಿ ಒಂದು ತಿಂಗಳಿನಿಂದ ನಿರಂತರವಾಗಿ ಜಿಟಿ ಜಿಟಿ ಮಳೆಯಾಗುತ್ತಿರುವುದರಿಂದ ರೈತರಿಗೂ ಟೊಮೇಟೊ ಬೆಳೆಯಲು ಸಾಧ್ಯವಾಗುತ್ತಿಲ್ಲ. ಜಿಟಿ ಜಿಟಿ ಮಳೆಯಿಂದಾಗಿ ರೈತರ ಜಮೀನಿನಲ್ಲಿ ನೀರು ನಿಂತಿದ್ದು, ಶೇಕಡ 50 ರಷ್ಟು ಉತ್ಪಾದನೆಗೆ ಹಾನಿಯುಂಟಾಗಿದೆ. ಹೀಗಾಗಿ ಟೊಮೇಟೊ ಪ್ರಮಾಣದಲ್ಲಿ ಶೇಕಡ 40 ರಷ್ಟು ಇಳಿಕೆಯಾಗಿದೆ. ಇದಿಷ್ಟೇ ಅಲ್ಲದೆ ದೇಶದ ನಾನಾ ಭಾಗಗಳಿಂದಲೂ ಟೊಮೇಟೊ ಸರಬರಾಜು ಆಗದೇ ಇರುವುದರಿಂದ ಬೆಲೆ ಏರಿಕೆ ಹೆಚ್ಚಾಗಿದೆ ಎಂದು ವ್ಯಾಪಾರಸ್ಥರು ಹೇಳಿದ್ದಾರೆ.

ಬೇಸಿಗೆ ವೇಳೆ ಈ ಹಿಂದೆ ಮಾರುಕಟ್ಟೆಗೆ ಟೊಮೇಟೊ ಹೆಚ್ಚು ಸರಬರಾಜಾಗುತ್ತಿತ್ತು. ಸಗಟು ದರ ಕೆ.ಜಿ.ಗೆ 4ರಿಂದ 5 ರೂ. ಇರುತ್ತಿತ್ತು ಈಗ ದಿಢೀರ್ ಎಂದು ಏರಿಕೆಯಾಗಿದೆ. ಕಳೆದ ವರ್ಷದ ಕೊನೆಯಲ್ಲಿ ಮಳೆ ಬಂದಿದ್ದರಿಂದ ಪ್ರತಿ ಕೆ.ಜಿ. ಟೊಮೇಟೊ 100 ರೂ. ಆಗಿತ್ತು. ಈಗ ಬೇಸಿಗೆಯಲ್ಲಿ ಬಿಸಿಲಿನ ತಾಪ ಹಾಗೂ ಅಕಾಲಿಕ ಮಳೆಯಿಂದ ಬೆಲೆ ಹೆಚ್ಚಿದೆ. ರೈತರ ಪ್ರಕಾರ ಇನ್ನು 15 ದಿನದಲ್ಲಿ ಕಡಿಮೆಯಾಗಬಹುದು.

■ ರವಿ | ಕಲಾಸಿಪಾಳ್ಯ ಮಾರುಕಟ್ಟೆ ವ್ಯಾಪಾರಿ

ರೈತರಿಗೆ ಸರ್ವೇ ಅವಕಾಶ

22-04-2022
Sk Pg 05

ಬೆಂಗಳೂರು: ರೈತರೇ ಸ್ವಯಂ ಸರ್ವೇ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರಿಗೆ ಸ್ವಯಂ ಸೇವೆಯ ಮುಖಾಂತರ ಸರ್ಕಾರದ ಸೇವಾ ಸೌಲಭ್ಯವನ್ನು ಪಡೆಯಲು ವ್ಯವಸ್ಥೆ ಸೃಷ್ಟಿಸುವುದು ಇದರ ಉದ್ದೇಶವಾಗಿದೆ. ಆಡಳಿತದಲ್ಲಿ ಸುಧಾರಣೆ ತಂದು ನಾಗರೀಕರಿಗೆ ತಮ್ಮ ಹಕ್ಕುಗಾರಿಕೆ ಮೇಲೆ ನಿಯಂತ್ರಣ ಸಾಧಿಸಲು ಅವಶ್ಯಕ ಬದಲಾವಣೆಯನ್ನು ಮಾಡಿ ಸಶಕ್ತಗೊಳಿಸುವುದು ಸರ್ಕಾರದ ಆಡಳಿತ ಸುಧಾರಣೆಯ ಉದ್ದೇಶ. 11 ಇ ಸ್ಕೆಚ್, ತತ್ಕಾಲ್ ಪೋಡಿ, ಹಾಲಿ ಹೊಂದಿರುವ ಕೃಷಿ ಜಮೀನಿನಲ್ಲಿ ತಮ್ಮ ಶಾಸನಾತ್ಮಕ ಹಕ್ಕಿನಂತ ವೈಯಕ್ತಿಕ ಭಾಗಾಂಶವನ್ನು ತೋರಿಸುವ ಸಂಬಂಧ ಸ್ಕೆಚ್, ಭೂಪರಿವರ್ತನಾ ಪೂರ್ವ ಸ್ಕೆಚ್ ಸಲ್ಲಿಸುವ ಅರ್ಜಿಗಳನ್ನು ಸರ್ಕಾರಿ ಭೂಮಾಪಕರು ಅಥವಾ ಪರವಾನಗಿ ಭೂಮಾಪಕರುಗಳಿಂದ ಸಿದ್ಧಪಡಿಸಲಾಗುತ್ತದೆ ಎಂದು ಹೇಳಿದರು.

ಸರ್ಕಾರಿ ಭೂಮಾಪಕರು ಮತ್ತು ಪರವಾನಗಿ ಭೂಮಾಪಕರ ಸಂಖ್ಯೆಯು ಸೀಮಿತವಾಗಿದ್ದು, ಪ್ರತಿ ತಿಂಗಳು ಒಂದು ಲಕ್ಷಕ್ಕಿಂತ ಹೆಚ್ಚಿನ ಅರ್ಜಿಗಳು ನಾಗರೀಕರಿಂದ ಸ್ವೀಕೃತವಾಗುತ್ತವೆ. ಇದರೊಂದಿಗೆ ಹೆಚ್ಚುವರಿಯಾಗಿ ಆರು ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯ ಅರ್ಜಿಗಳು ಅಳತಗಾಗಿ ವಿವಿಧ ಹಂತಗಳಲ್ಲಿ ಬಾಕಿ ಇರುತ್ತವೆ. ಇದರಿಂದಾಗಿ ನಾಗರೀಕರು ತಮ್ಮ ಸ್ವಂತ ಜಮೀನಿನಲ್ಲಿ ಯಾವುದೇ ರೀತಿಯ ಕ್ರಯ ಮತ್ತು ವಿಭಾಗ ಮಾಡಿಸಿಕೊಳ್ಳಲು ಅಗತ್ಯವಿರುವ ಸ್ಕೆಚ್ ಗಾಗಿ ಹಲವಾರು ತಿಂಗಳುಗಳು ಮತ್ತು ಕೆಲಮೊಮ್ಮೆ ವರ್ಷದವರೆಗೆ ಕಾಯಬೇಕಾಗುತ್ತದೆ. ಇದೆಲ್ಲ ಸಮಸ್ಯೆಗೆ ಪರಿಹಾರ ನೀಡಲು ನಾಗರಿಕರೇ ತಮ್ಮ ಜಮೀನಿಗೆ ಸ್ವಂತ ನಕ್ಷೆ ಮಾಡಿಕೊಳ್ಳಲು ಕಂದಾಯ ಇಲಾಖೆ ಯೋಜನೆಯೊಂದನ್ನು ರೂಪಿಸಿದೆ. 11ಇ ಸ್ಕೆಚ್, ತತ್ಕಾಲ ಪೋಡಿ ಇವುಗಳನ್ನು ಜನರು ಸ್ವಂತ ಜಮೀನಿಗೆ ತಾವೇ ಮಾಡಿಕೊಳ್ಳಲು ಅವಕಾಶ ನೀಡುತ್ತಿದ್ದೇವೆ. ಇದರಿಂದ ಸರ್ವೇ ವಿಳಂಬವಾಗಿ, ಸಾರ್ವಜನಿಕರಿಗೆ ಆಗುತ್ತಿದ್ದ ಸಮಸ್ಯೆ ಬಗೆಹರಿಯುತ್ತದೆ ಎಂದು ಸಚಿವರು ಅಭಿಪ್ರಾಯಪಟ್ಟರು.

22-04-2022
Sk Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

DATA POINT



Heat wave may curtail wheat export

At a time when India is looking to fill the world's wheat granaries depleted by the Ukraine-Russia war, two new developments in Punjab may potentially reduce its export levels this year.

By Jasmin Nihalani, Vignesh Radhakrishnan and Vikas Vasudeva

First, evidence from Punjab shows that the wheat arrivals in mandis have been 20% lower this year compared to 2021. The primary reason behind the reduction is the extreme levels of heat. The average temperature in April has been consistently above the 40°C mark across Punjab. This has reduced the wheat yield significantly this year. **Second,** the local prices of wheat and wheat flour are accelerating. These two factors may dampen India's wheat export plans given that India may prioritise local availability of wheat while also aiming to cool down the market prices.

■ **WHEAT ARRIVALS** | The chart shows the **wheat arrivals in Punjab's mandis** in the first twenty days of the 2021 and 2022 seasons. In this period, 73 lakh metric tonnes of wheat have reached the mandis in 2022, 20% less than the 92.4 lakh recorded in 2021



■ **HEAT MAP** | The map shows the **temperature anomaly** across Punjab between April 8 and 14, compared to the long period average. In most places, the maximum temperature was over 6°C than the usual



SOURCE: PUNJAB MANDI BOARD, MOSPI, IMD CHANDIGARH, PUNJAB AGRICULTURE DEPARTMENT

■ **RISING PRICES** | The chart shows the **wholesale inflation of wheat** and the **consumer inflation of wheat flour** in India. Wholesale inflation was over 14% and retail inflation was 7.77% in March 2022, both figures being the highest since April 2017



■ **YIELD DIPS** | Crop cutting experiments show that due to the extreme heat, the **yield of wheat** in the State has dipped this year.
Last year, the wheat productivity was 19.7 quintal per acre, while the average yield this year is below 18 quintal per acre. However, of the 2,000 crop cutting experiments only 1,200 have been completed till date

